SRI K. V. SHANKARA GOWDA:—No compensation will be given.

ಶ್ರೀ ಎಸ್. ಎಚ್ ಪುಟ್ಟರಂಗನಾಥ್:—ಸರ್ಕಾರಿ ಶಾಲೆಗಳನ್ನು ಬಾಡಿಗೆ ಕಟ್ಟಡಗಳಲ್ಲಿ ನಡೆಸತಕ್ಕ ಸಂದರ್ಭಗಳಲ್ಲಿ ಕಟ್ಟಡದ ಮಾಲೀಕರಿಗೆ. ಕಿಂಗಳು ಕಿಂಗಳು ಬಾಡಿಗೆ ಪಾವತಿ ಮಾಡುವಾಗ ದುಡ್ಡು ಡಿಮ್ಯಾಂಡ್ ಮಾಡತಕ್ಕ ಸಂದರ್ಭ ಇದೆ. ಇಂತಹ ಒಂದು ಪ್ರಸಂಗ ಹಾಸನದ ಡಿ ಇ ಒ ಮಾಡಿದ್ದಾರೆಂದು ನಾನು ಆಪಾದನೆ ಮಾಡಂತ್ತೀನೆ, ಇದಕ್ಕೆ ತಾವು ಏನು ಹೇಳುತ್ತೀರಿ ?

SRI K. V. SHANKARA GOWDA:—I want notice for this question.

QUARTERS FOR THE ASSISTANT SURGEON AND REVENUE INSPECTOR AT BILIGERE

376. SRI V. L. SIVAPPA (Tiptur):—

Will the Minister for Public Works be pleased to state :—

(*a*) whether it is a fact that quarters for the Assistant Surgeon and Revenue Inspector were sanctioned to be built at Biligere, Tiptur Taluk and foundation also was laid during 1969 on sites given by the Biligere Village Panchayat ;

(*b*) whether the location of the quarters was changed to Kibbanahalli ;

(*c*) the reasons for the sudden change of decision ?

SRI BASAVARAJ MAGAVI (Deputy Minister for Public Works) :—

(*a*) Yes.

(*b*) The location of the Revenue Inspector's Quarters was changed to Kibbanahalli.

(*c*) It was felt that the quarters of the Revenue Inspector should be constructed at the Hobli Head-quarters only.

ಶ್ರೀ ವಿ. ಎಲ್. ಶಿವಪ್ಪ:—ರೆವೆನ್ಯೂ ಇನ್ ಪೆಕ್ಟರ್ ಕ್ವಾರ್ಟರ್ಸ್ ಯಾವಾಗ ಬಿಳಿಗೆರೆಯಿಂದ ಕಿಬ್ಬನಹಳ್ಳಿಗೆ ಬದಲಾಯಿಸಬೇಕೆಂದು ತೀರ್ಮಾನವಾಯಿತು ?

ಶ್ರೀ ಬಸವರಾಜ ಮಾಗವಿ:—ರೆವೆನ್ಯೂ ಅಧಿಕಾರಿಗಳು, ಈ ವೆಟೆರಿನರಿ ಅಸಿಸ್ಟೆಂಟ್ ಸರ್ಜೆನ್ಸ್ ಕ್ವಾರ್ಟರ್ಸ್ ಮತ್ತು ರೆವೆನ್ಯೂ ಇನ್ಸ್ ಪೆಕ್ಟರ್ಸ್ ಕ್ವಾರ್ಟರ್ಸ್ ಮೊದಲು ಬಿಳಿಗೆರೆಯಲ್ಲಿ ಕಟ್ಟಬೇಕೆಂದು ತಿಳಿಸಿದ್ದರು. ಆ ಮೇಲೆ ಹೋಬಳಿ ಹೆಡ್‌ಕ್ವಾರ್ಟರ್ಸ್‌ನಲ್ಲಿಇರುವುದು ಒಳ್ಳೆಯದೆಂದು ಕಿಬ್ಬನಹಳ್ಳಿಯಲ್ಲಿ ಕಟ್ಟಬೇಕೆಂದು ಹೇಳಿ ಸೂಚನೆ ಬಂತು. ಅದರ ಪ್ರಕಾರ ಅಲ್ಲಿಗೆ ಬದಲಾಯಿಸಲಾಗಿದೆ.

ಶ್ರೀ ವಿ. ಎಲ್ ಶಿವಪ್ಪ:— ಬಿಳಿಗೆರೆಗೆ ಹೆಡ್‌ಕ್ವಾರ್ಟರ್ಸ್ ೬ ಫರ್ಲಾಂಗು ದೂರ ಇರುವುದು. ಬಿಳಿಗೆರೆಯಲ್ಲಿ ವಿದ್ಯಾಭ್ಯಾಸ ಸೌಕರ್ಯ ಇದೆ. ಆಸ್ಪತ್ರೆ ಇದೆ, ಎಲ್ಲಾ ಇದೆ. ಮೊದಲು ಅಲ್ಲಿ ಮಾಡಬೇಕೆಂದು ಮಾಡಿ, ನಂತರ ಅದನ್ನು ಬದಲಾವಣೆ ಮಾಡಿದ್ದುಯಾವ ಇಲಾಖೆ, ಮತ್ತು ಯಾವಾಗ ?

ಶ್ರೀ ಬಸವರಾಜ ಮಾಗವಿ; —ನಾನು ಈಗತಾನೇ ಹೇಳಿದೆ. ರೆವೆನ್ಯೂ ಇಲಾಖೆಯವರು ಹೋಬಳಿ ಹೆಡ್‌ಕ್ವಾರ್ಟರ್ಸ್ ಎಲ್ಲಿ ಇದೆಯೋ, ಅಲ್ಲಿ ರೆವೆನ್ಯೂ ಇನ್ಸ್‌ಪೆಕ್ಟರ್ಸ್ ಕ್ವಾರ್ಟರ್ಸ್ ಇರಬೇಕೆಂದು ಆದೇಶ ಕೊಟ್ಟರು, ಆ ರೀತಿ ಅದನ್ನು ಮಾಡಲಾಗಿದೆ.

ಶ್ರೀ ಎಂ. ನಾಗಪ್ಪ; —ಈಗ ಫೌಂಡೇಶನ್ ಸ್ಟೋನ್ ಬಿಳಿಗೆರೆಯಲ್ಲಿ ಹಾಕಿದ್ದಿರಿ ಈ ಫೌಂಡೇಶನ್ ಸ್ಟೋನ್ ಹಾಕಿದವರು ಯಾರು, ಮತ್ತು ಅದರ ಗತಿ ಏನು ? ಅದನ್ನು ತಿಳಿಸಬೇಕು.

ಶ್ರೀ ಬಸವರಾಜ ಮಾಗವಿ:—ಫೌಂಡೇಶನ್ ಸ್ಟೋನ್ ಯಾರು ಹಾಕಲ್ಲಿಲ್ಲ. ಜನರಲ್ಲಾಗಿ ಕೆಲಸ ಪ್ರಾರಂಭ ಮಾಡಿದೆಯೆಂದು ಉತ್ತರ ಕೊಟ್ಟಿದೆ. ಫೌಂಡೇಶನ್ ಸ್ಟೋನ್ ಯಾರೂ ಹಾಕಲ್ಲಿಲ್ಲ.

ಶ್ರೀ ಎಚ್. ಸಿದ್ಧವೀರಪ್ಪ;—ರೆವೆನ್ಯೂ ಇನ್ಸ್‌ಪೆಕ್ಟರರ ಕ್ವಾರ್ಟರ್ಸ್ ಬಿಳಿಗೆರೆಯಲ್ಲಿ ಆಗಲು ಕೆಲಸ ಶುರು ಮಾಡುವುದಕ್ಕೆ ಗುದ್ದಲಿ ಪೂಜೆ ಮಾಡಿ, ಮೊದಲು ಸ್ಥಳದಿಂದ ಕಿಬ್ಬನಹಳ್ಳಿಗೆ ವರ್ಗಮಾಡುವುದಕ್ಕೆರ ನಿಮ್ಮ ಮುಖ್ಯಮಂತ್ರಿಯವರ ಪ್ರೈವೇಟ್ ಸೆಕ್ರಟರಿಯವರ ಟೆಲಿಫೋನ್ ಮೆಸ್ಸೇಜ್ ಹೋಗಿ ಅದರ ಪ್ರಕಾರ "ಅಂಡರ್ ಇನ್ವೆಸ್ಟಿಗೇಷನ್ಸ್, ಬೈದಿ ಪ್ರೈವೇಟ್ ಸೆಕ್ರಟರಿ ಆಫ್ ಚೀಫ್ ಮಿನಿಸ್ಟರ್," ಓನ್ ದಿ ಫೋನ್ ಎಂದು ಆರ್ಡರ್ ಆಗಿ, ಮೊದಲು ಸ್ಥಳದಿಂದ ಕಿಬ್ಬನಹಳ್ಳಿಗೆ ಬದಲಾಯಿಸಿರುವುದು ನಿಜವೇ ಹಾಗಿದ್ದರೆ ಆ ರೀತಿ ಟೆಲಿಫೋನ್ ಮೆಸ್ಸೇಜ್ ಪ್ರೈವೇಟ್ ಸೆಕ್ರಟರಿಯವರು ಕಳಿಸುವುದಕ್ಕೆ ಯಾರು ಕಾರಣರು ?

ಶ್ರೀ ಬಸವರಾಜ ಮಾಗವಿ ;—ನನ್ನ ಹತ್ತಿರ ಪಿಡಬ್ಲ್ಯುಡಿಗೆ ಸಂಬಂಧಪಟ್ಟ ಫೈಲು ಇದೆ. ಅದರಲ್ಲಿ ರೆವೆನ್ಯೂ ಅಧಿಕಾರಿಗಳು ಸೂಚನೆಯನ್ನು ಕೊಟ್ಟಿದ್ದಾರೆ ! ಏನಹ ಪ್ರೈವೇಟ್ ಸೆಕ್ರಟರಿಯವರ ಫೋನ್ ಮಾಡಿದ ವಿಚಾರ ಯಾವುದೂ ನನಗೆ ಗೊತ್ತಿಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.— ಫೌಂಡೇಶನ್ ಸ್ಟೋನ್ ಹಾಕಿಲ್ಲವೆಂದು. ಹೇಳಿದ್ದೀರಿ ಅಲ್ಲಿ ತಳಪಾಯ ತೆಗೆದು ಬಿಟ್ಟು, ಅದಕ್ಕೆ ಸುಮಾರು ಹಣವನ್ನು ಖರ್ಚುಮಾಡಿದ್ದೀರಿ. ಆ ಮೇಲೆ ಸ್ಥಳ ಬದಲಾವಣೆ ಮಾಡಿರತಕ್ಕ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಬಸವರಾಜ ಮಾಗವಿ;—ವೆಟರಿನೆರಿ ಸರ್ಜನ್ಸ್ ಕ್ವಾರ್ಟರ್ಸ್ ಹಾಗೂ ರೆವೆನ್ಯೂ ಇನ್ಸ್‌ಪೆಕ್ಟರ್ ಕಾರ್ಟರ್ಸ್‌ಗೆ ಬರೇ ಎಕ್ಸ್‌ಕವೇಶನ್ ಕೆಲಸ ಮಾತ್ರ ಆಗಿದೆ. ಅದಕ್ಕೆ ಬೇರೆ ಯಾವ ಖರ್ಚು ಮಾಡಿಲ್ಲ.

[Mr. Speaker in the Chair]

ಶ್ರೀ ಸಿ. ಎಂ. ಎಸ್. ಶಾಸ್ತ್ರಿ :— ಇದಕ್ಕೆ ಎಷ್ಟು ಖರ್ಚಾಯಿತು ? ಹಣ ಏನೂ ಖರ್ಚಾಗಲ್ಲಿವೇ ? ಎಕ್ಸಕವೇಷನ್‌ಗೆ ಎಷ್ಟು ಹಣ ಖರ್ಚಾಗಿದೆ ?

SRI BASAVARAJ MAGAVI :— Excavation only was undertaken which does not involve much expenditure. The same material has been used for the construction of the veterinary surgeons quarters.

ಶ್ರೀ ಸಿ.ಎಂ.ಎಸ್. ಶಾಸ್ತ್ರಿ :— ಎಕ್ಸಕವೇಷನ್‌ಗೆ ಎಷ್ಟು ಹಣ ಖರ್ಚಾಯಿತು ಎಂದು ತಿಳಿಸುತ್ತೀರಾ ?

ಶ್ರೀ ಬಸವರಾಜ್ ಮಾಗಾವಿ :— ಈಗತಾನೇ ಹೇಳಿದೆ. ಎಕ್ಸಕವೇಷನ್‌ಗೆ ಇನ್‌ಷಿಯಲ್ ಸ್ಟೇಜಿನಲ್ಲಿ ಮಣ್ಣು ಸ್ವಲ್ಪ ಆಗೆದಿದ್ದೇ ವಿನಹ ಹೇಳತಕ್ಕಂಥ ಖರ್ಚನ್ನು ಸರಕಾರ ಮಾಡಲಿಲ್ಲ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ :— ನಾನು ಕೇಳಿದ ಪ್ರಶ್ನೆಗೆ ಸರಿಯಾದ ಉತ್ತರವನ್ನು ತಾವು ದೊರಕಿಸಿಕೊಡಬೇಕು. ಎಕ್ಸವೇಷನ್ ಮಾಡುವುದಕ್ಕೆ ಏನೂ ಹಣ ಖರ್ಚಾಗಲಿಲ್ಲ ಎಂದರೆ ಎಷ್ಟು ಖರ್ಚಾಗಿದೆ ಎಂದು ದಯವಿಟ್ಟು ತಿಳಿಸುತ್ತೀರಾ ?

ಶ್ರೀ ಬಸವರಾಜ್ ಮಾಗಾವಿ :— ಮಾನ್ಯ ಸದಸ್ಯರಿಗೆ ಈಗತಾನೆ ಹೇಳಿದೆ ಫೌಂಡೇಷನ್ ಎಕ್ಸ್‌ಕೇವೇಷನ್ ಮಾಡುವುದಕ್ಕೆ ನೂರಾರು ಮಾತ್ರ ಖರ್ಚಾಗುತ್ತದೆ. ಇದಕ್ಕಿಂತ ಹೆಚ್ಚಾಗಿ ಆಗಿಲ್ಲ.

ಶ್ರೀ ಎಸ್. ಬಂಗಾರಪ್ಪ :— ಆಸ್ತಿಭಾರ ಹಾಕುವುದಕ್ಕೆ ಎಷ್ಟು ಅಮೌಂಟ್ ಖರ್ಚಾಗಿದೆ ಎರಡನೇ ಸಾರಿ ಆಸ್ತಿಭಾರ ಹಾಕುವುದಕ್ಕಿಂತ ಮೊದಲು ಈ ನಿವೇಶನ ತೀರ್ಮಾನವಾಗಿಯೇ ಇಲ್ಲವೇ ? ತೀರ್ಮಾನ ಮಾಡಿದ್ದಾಗ ಅದನ್ನು ಬದಲಾಯಿಸತಕ್ಕಂಥದ್ದು ರಾಜಕೀಯವಾಗುವುದಿಲ್ಲವೇ ?

ಶ್ರೀ ಬಸವರಾಜ್ ಮಾಗಾವಿ :— ಆಸ್ತಿಭಾರ ಹಾಕಿರಲಿಲ್ಲ ಎಂದು ಸಭೆಯ ಮುಂದೆ ಅರಿಕೆ ಮಾಡಿಕೊಂಡಿದ್ದೇನೆ. ಎರಡನೆಯದು ಮುಖ್ಯವಾಗಿ ಕಿಬ್ಬನಹಳ್ಳಿಗಿಂತ ಬಿಳಿಕೆರೆಯಲ್ಲಿ ಇರುವುದು ಅನುಕೂಲ ಎಂದು ತಿಳಿದುಕೊಂಡಿದ್ದೆವು. ಆದರೆ ರೆವಿನ್ಯೂ ಅಧಿಕಾರಿಗಳು ಹೋಬಳಿ ಹೆಡ್‌ಕ್ವಾರ್ಟರ್ಸ್‌ನಲ್ಲಿ ಇರಬೇಕೆಂದು ಅಭಿಪ್ರಾಯ ಪಟ್ಟಿದ್ದರಿಂದ ಕಿಬ್ಬನಹಳ್ಳಿಗೆ ಬದಲಾಯಿಸಲಾಯಿತು.

ಶ್ರೀ ಎಸ್. ಬಂಗಾರಪ್ಪ :— ಮೊದಲು ಆಸ್ತಿಭಾರ ಹಾಕಿದ್ದಕ್ಕೆ ಕರೆಕ್ಟ್ ಫಿಗರ್ಸ್ ಬೇಕು ?

ಶ್ರೀ ಬಸವರಾಜ್ ಮಾಗಾವಿ :— ಆಸ್ತಿಭಾರ ಹಾಕಲಿಲ್ಲ ಎಂದು ಹೇಳಿದ್ದೇನೆ. The answer pertains to the first part of the question.

ಶ್ರೀ ಬಿ. ಪಿ. ಗಂಗಾಧರ್ :— ಬಿಳಿಗೆರೆ ಗ್ರಾಮದಲ್ಲಿ ಬಿಲ್ಡಿಂಗ್ ಕಟ್ಟುವುದಕ್ಕೆ ಎಸ್ಟಿಮೇಟ್ ಪ್ಲಾನ್ ಪ್ರಿಪೇರ್ ಆ ಗಿತ್ತು. ಕಿಬ್ಬನ ಹಳ್ಳಿಗೆ ಕಟ್ಟಲಿಕ್ಕೆ ಪ್ಲಾನ್ ಎಸ್ಟಿಮೇಟ್ ಪ್ರಿಪೇರ್ ಆಗಿರಲಿಲ್ಲ. ಬಿಳಿಗೆರೆ ಪ್ಲಾನನು ಎಸ್ಟಿಮೇಟ್ ಮಾಡಿದ್ದೀರಿ; ಅದನ್ನೇ ಕಿಬ್ಬನಹಳ್ಳಿಗೂ ಮಾಡಿದ್ದೀರಾ ಅಥವಾ ಅದಕ್ಕೆ ಬೇರೆ ಪ್ರಿಪೇರ್ ಮಾಡಿದ್ದೀರಾ ?

ಶ್ರೀ ಬಸವರಾಜ್ ಮಾಗಾವಿ :— ಅನೇಕ ಸಲ ಹೇಳಿದ್ದೇನೆ. ಬಿಳಿಗರೆ ಸ್ವಲ್ಪ ದೊಡ್ಡ ಊರು. ಅಲ್ಲಿ ಅನುಕೂಲಗಳು ಇವೆ ಎನ್ನುವ ದೃಷ್ಟಿಯಿಂದ ರೆವಿನ್ಯೂ ಇನ್‌ಸ್ಪೆಕ್ಟರ್ ಹೆಡ್‌ಕ್ವಾರ್ಟರ್ಸ್ ಮತ್ತು ರೆಸಿಡೆನ್ಸ್ ಮತ್ತು ವೆಟರ್‌ನರಿ ಸರ್ಜನ್ಸ್ ರೆಸಿಡೆನ್ಸ್, ಇವೆರಡನ್ನೂ ಒಂದೇ ಕಡೆ ಮಾಡಬೇಕೆಂದಿದ್ದೆವು. ಆದರೆ ಇದು ಕಿಬ್ಬನಹಳ್ಳಿ ಹೋಬಳಿ ಹೆಡ್‌ಕ್ವಾರ್ಟರ್ಸ್ ಆಗಿರುವುದರಿಂದ ಇಲ್ಲಿ ಕ್ವಾರ್ಟರ್ಸ್ ಕಟ್ಟುವುದು ಯೋಗ್ಯ ಎನ್ನುವ ದೃಷ್ಟಿಯಿಂದ ಕಟ್ಟಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ :— ಕಿಬ್ಬನಹಳ್ಳಿ ಹೋಬಳಿ ಹೆಡ್‌ಕ್ವಾರ್ಟರ್ಸ್ ಆಗಿದ್ದರೂ ಬಿಳಿಕೆರೆಯಲ್ಲಿ ಎಲ್ಲಾ ಅಧಿಕಾರಿಗಳು ಇದ್ದು ಅನುಕೂಲ ಇದೆ. ಹೆಸರಿಗೆ ಕಿಬ್ಬನಹಳ್ಳಿ ಹೆಡ್‌ಕ್ವಾರ್ಟರ್ಸ್ ಆಗಿದೆ. ಈ ವಂಥ್ಯೆ ಯಾರೋ ಒಬ್ಬ ಅಧಿಕಾರಿಗಳ ದಾಕ್ಷಿಣ್ಯಕ್ಕೆ ಒಳಗಾಗಿ ಈ ರೀತಿಯಿಂದ ಮಾಡಿದರೆ ಮುಂದೆ ಬರತಕ್ಕಂಥ ಅಧಿಕಾರಿಗಳಿಗೆ ಅನಾನುಕೂಲವಾಗುತ್ತದೆ. ಆದುದರಿಂದ ಅದನ್ನು ಬಿಳಿಕೆರೆಗೆ ಬದಲಾಯಿಸಿ ಜನರಿಗೆ ಅನುಕೂಲ ಮಾಡುವಯೋಜನೆ ಸರಕಾರದವರು ಯಾಕೆ ಮಾಡಬಾರದು ?

ಶ್ರೀ ಬಸವರಾಜ್ ಮಾಗಾವಿ :— ಹೋಬಳಿ ಹೆಡ್‌ಕ್ವಾರ್ಟರ್ಸ್ ಎಲ್ಲಿ ಇದೆಯೋ ಅಲ್ಲಿ ರೆವೆನ್ಯೂ ಇನ್‌ಸ್ಪೆಕ್ಟರ್ಸ್ ಇರುವುದು ಸೂಕ್ತ. ಆ ಪ್ರಕಾರ ಅಲ್ಲಿ ಕಟ್ಟಿದ್ದಾರೆಯೇ ಏನಹ ಬಿಳಿಕೆರೆಯಲ್ಲಿ ಬೇರೆ ಅನುಕೂಲತೆಗಳು ಇದ್ದರೂ ಕೂಡ ಅದನ್ನು ಕಿಬ್ಬನಹಳ್ಳಿಯಲ್ಲಿ ಕಟ್ಟಿದ್ದಾರೆ.

ಶ್ರೀ ಎಸ್. ಶಿವಪ್ಪ :— ಹೋಬಳಿ ಹೆಡ್‌ಕ್ವಾರ್ಟರ್ಸ್‌ನಲ್ಲಿ ರೆವೆನ್ಯೂ ಇನ್‌ಸ್ಪೆಕ್ಟರ್ಸ್ ಕ್ವಾರ್ಟರ್ಸ್ ಇರಬೇಕು ಎನ್ನುವುದು ಮೊದಲು ಬಿಳಿಕೆರೆಯಲ್ಲಿ ಪ್ಲಾನ್ ಎಸ್ಟಿಮೇಟ್ ಸಾಂಕ್ಷನ್ ಮಾಡುವಾಗ ಗೊತ್ತಿರಲಿಲ್ಲವೇ ?

ಶ್ರೀ ಬಸವರಾಜ್ ಮಾಗಾವಿ :— ಬಿಳಿಕೆರೆಯಲ್ಲಿ ಅನೇಕ ಅನುಕೂಲಗಳು ಇವೆ ಎಂದು ಮಾಡಿತ್ತು. ಡೆಮ್ಕೋಟಿ ಕಮಿಷನ್ನರ ಹೋಬಳಿ ಹೆಡ್‌ಕ್ವಾರ್ಟರ್ಸ್‌ನಲ್ಲಿ ಹೆಚ್ಚು ಅನುಕೂಲಗಳು ಇದೆ ಎಂದು ಹೇಳಿದಮೇಲೆ after second thought he directed the Executive Engineer, P W.D. Tumkur that this building should be constructed at Kibbanahalli and accordingly construction was undertaken.

SRI C. K. RAJAIAH SETTY :— The Minister was pleased to state that on the request of the revenue authorities it was changed from Biligere to Kibbanahalli. Who is that authority, Sir ? Is it not a fact that Biligere was perferred because there was a hospital and other conveniences in that place ?

SRI BASAVARAJ MAGAVI :— It is the Deputy Commissioner, Tumkur, that has directed the Executive Engineer, P.W.D. to construct the said building at Kibbanahalli.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ :— ಎಕ್ಸ್‌ಪೆಂಡಿಚರ್ ಎಷ್ಟಾಗಿದೆ ?

MR. SPEAKER :— The Supplementary is disallowed as it is outside the scope of the Question

SRI H. SIDDAVEERAPPA :— The Minister has repeated this answer 100 times. What is the use of repeating ?

SRI BASAVARAJ MAGAVI :— What am I to do when questions are repeated ? I am obliged to repeat my answers.

ಶ್ರೀ ವಿ. ಎಲ್. ಶಿವಪ್ಪ:—ಜಿಲ್ಲಾಧಿಕಾರಿಯವರು ಹೇಳಿದ ಮೇರೆಗೆ ಸ್ಥಳವನ್ನು ಬದಲಾಯಿಸಲಾಯಿತು ಎಂಬುದಾಗಿ ಈಗತಾನೆ ಮಾನ್ಯ ಮಂತ್ರಿಗಳು ಹೇಳಿದರು. ಅದು ಸರಿಯಲ್ಲ. ಆ ಭಾಗದ ಪಂಚಾಯಿತಿ ಚೇರ್‌ಮನ್ ಪಿ. ಎಸ್. ಪಿ. ಕಡೆಯವರಾಗಿದ್ದು ಅವರಿಗೆ ಅಪಮಾನಪಡಿಸಬೇಕೆಂಬ ರಾಜಕೀಯ ಉದ್ದೇಶದಿಂದ ಆಲ್ಲಿಯ ಎ. ಐ. ಸಿ. ಸಿ ಕಾಂಗ್ರೆಸ್ ಮುಖಂಡರೊಬ್ಬರು ಮುಖ್ಯ ಮಂತ್ರಿಗಳ ಪರ್ಸನಲ್ ಸೆಕ್ರಿಟರಿಯವರಿಗೆ ಹೇಳಿ ಅವರು ಜಿಲ್ಲಾಧಿಕಾರಿಯವರ ಮೂಲಕ ಸಂಬಂಧಪಟ್ಟ ಎಕ್ಸಿಕ್ಯುಟಿವ್ ಇಂಜಿನಿಯರ್‌ಗೆ ಸ್ಥಳ ಬದಲಾಯಿಸುವಂತೆ ಹೇಳಿದ್ದು ನಿಜವೇ? ಈ ಬಗ್ಗೆ ಬೇಕಾದರೆ ಸಂಬಂಧಪಟ್ಟ ರೆಕಾರ್ಡ್‌ಗಳನ್ನು ತರಿಸಿ ನೋಡಿದರೆ ತಮಗೆ ಗೊತ್ತಾಗುತ್ತದೆ. ಈ ರೀತಿ ಸಭೆಯಲ್ಲಿ ಸುಳ್ಳು ಉತ್ತರ ಕೊಡಬಾರದು. ಆಗಿದ್ದು ಆಗಿ ಹೋಯಿತು ಇನ್ನು ಮುಂದೆಯಾದರೂ ಕೂಡ ಯಾರಿಗೂ ಅವಮಾನವಾಗದ ರೀತಿಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇವೆಂಬ ಭರವಸೆಯನ್ನಾದರೂ ಕೂಡ ಕೊಡುತ್ತೀರಾ?

ಶ್ರೀ ಬಸವರಾಜ ಮಾಗಾವಿ:—ಇದರಲ್ಲಿರಾಜಕೀಯದುರುದ್ದೇಶ ಇದೆ ಎಂಬುದನ್ನು ನಾನು ಸಂಪೂರ್ಣವಾಗಿ ಅಲ್ಲಗಳೆಯುತ್ತೇನೆ. ಮಾನ್ಯ ಅಧ್ಯಕ್ಷರೂ ಕೂಡ ಇದನ್ನು ಒಪ್ಪಿಕೊಳ್ಳುತ್ತಾರೆಂದು ಕಾಣುತ್ತದೆ. ಯಾವಾಗಲೂ ಹೋಬಳಿ ಮುಖ್ಯಾಲಯ ಇರುವಲ್ಲಿ ಮಾತ್ರ ರೆವಿನ್ಯೂ ಇನ್ಸ್‌ಪೆಕ್ಟರ್ ಅವಶ ವಸತಿ ಗೃಹಗಳ ನಿರ್ಮಾಣ ಮಾಡುವುದು ಪದ್ಧತಿ ಇದೆ.

SRI H. SIDDAVEERAPPA:—It has been specifically stated that there is instruction from the office of the Chief Minister to the Executive Engineer. what do you say to that? will you look into the records or get the paper and give information.

SRI B. V. MAGAVI:—As far as I have gone through the records, I find no instruction given by the office of the Chief Minister.